ಇ) ಸಾರ್ವಜನಿಕ ಹಾಗೂ ಐತಿಹಾಸಿಕ ಹಿನ್ನೆಲೆಯಲ್ಲಿ ಪುನರ್ ವಸತಿ ಸಂಗೊಳ್ಳಿಯಲ್ಲಿ (Rehabited Area) ಸಂಗೊಳ್ಳಿ ರಾಯಣ್ಣ ಸಮಾಧಿಯನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಲು ಯಾವ ಕ್ರಮವನ್ನು ಕೈಕೊಂಡಿರುವರು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಸರ್ಕಾರದ ವತಿಯಿಂದ ಪ್ರತಿಷ್ಠಾಪಿಸಿಲ್ಲ. ಸಾರ್ವಜನಿಕರ ಸಣ್ಣ ಕೊಠಡಿಯಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದಾರೆ.

ಇ) ವಿಷಯವು ಪರಿಶೀಲನೆಯಲ್ಲಿದೆ.

ಕಪ್ಪು ಹಲಗೆಯ ಕಾರ್ಯಾಚರಣೆ

೧೧೧೬. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಪ್ಪು ಹಲಗೆಯ ಕಾರ್ಯಚರಣೆಯ ರೇಷೆಗಳೇನು ?

ಆ) ೧೯೮೭–೮೮ ಹಾಗೂ ೧೯೮೮–೮೯ರಲ್ಲಿ ಸರ್ಕಾರವು ಈ ಕಾರ್ಯಕ್ಕೆ ಕಾಯ್ದಿರಿಸಿದ ಹಣವೆಷ್ಟು?

ಇ) ರಾಜ್ಯದಲ್ಲಿ ಆಯ್ದುಕೊಂಡ ತಾಲ್ಲೂಕುಗಳು ಎಷ್ಟು ?

ಈ) ಇನ್ನುಳಿದ ತಾಲ್ಲೂಕುಗಳಿಗೆ ಈ ಕಾರ್ಯವನ್ನು ವಿಸ್ತರಿಸುವ ಯೋಜನೆ ಸರ್ಕಾರಕ್ಕೆ ಇದೆಯೇ

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ರ ಅಡಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಫಲಗೊಳಿಸಲು ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ.

೧) ಪ್ರತಿಯೊಂದು ಪ್ರಾಥಮಿಕ ಶಾಲೆಯೂ,—

ಅ) ಕನಿಷ್ಠ ಪಕ್ಷ ೨ ಕೊಠಡಿಗಳನ್ನು ಹೊಂದಿರಬೇಕು.

ಆ) ಬಾಲಕ-ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ

ಇ) ಕುಡಿಯಲು ಶುದ್ಧ ನೀರು ವಿದ್ಯುತ್ ವ್ಯವಸ್ಥೆ

ಈ) ಪಾಠೋಪಕರಣ-ಪಿಠೋಪಕರಣಗಳ ಪೂರೈಕೆ

೨) ಏಕೋಪಾಧ್ಯಾಯ ಶಾಲೆಗಳಿಗೆ ಮತ್ತೊಂದು ಉಪಾಧ್ಯಾಯರ ನೇಮಕ ಆದ್ಯತೆ ಮಹಿಳೆಯರಿಗೆ.

ಆ) ೧೯೮೭–೮೮ ೬.೭೮ ಕೋಟಿ ರೂಪಾಯಿಗಳು. ೧೯೮೮–೮೯ ಕಾಯ್ದಿರಿಸಿಲ್ಲ.

ಇ) ೧೯೮೭–೮೮ರ ಸಾಲಿಗೆ ಒಟ್ಟು ೧೯ ತಾಲೂಕುಗಳನ್ನು ಆಯ್ದುಕೊಳ್ಳಲಾಗಿದೆ.

ಈ) ಇದೆ.

ರಾಜ್ಯದಲ್ಲಿರುವ ಮಹಿಳೆಯರ ಶಾಲಾ–ಕಾಲೇಜುಗಳು

೭೯೭. ಶ್ರೀ ಪಂಪಾಪತಿಯವರು (ದಾವಣಗೆರೆ).—ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಮಹಿಳಾ ಶಾಲಾ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳೆಷ್ಟು ?